ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಬೆಂಗಳೂರು ನಗರ ಜಿಲ್ಲೆ ಮತ್ತು ಉಪನಿರ್ದೇಶಕರ ಕಚೇರಿ ಬೆಂಗಳೂರು ದಕ್ಷಿಣ ಜಿಲ್ಲೆ

ಎಸ್ ಎಸ್ ಎಲ್.ಸಿ. ಸರಣಿ ಪರೀಕ್ಷೆ- 2024-25 ಪ್ರಶ್ನೆ ಪತ್ರಿಕೆ - 1

ವಿಷಯ: ಸಮಾಜ ವಿಜ್ಞಾನ ಸಮಯ: 90 ನಿಮಿಷ ಅಂಕಗಳು—40

***************************************************************************************************

I. ಕೆಳಗೆ ಕೊಟ್ಟಿರುವ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ ಹೆಚ್ಚು ಸೂಕ್ತವಾದ ಉತ್ತರವನ್ನು ಆಯ್ಕೆ ಮಾಡಿ ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ 4X1=4

1. ಲಾಹೋರ್ ಒಪ್ಪಂದಕ್ಕೆ ಸಹಿ ಹಾಕಿದವರು
   ಅ) ಬ್ರಿಟಿಷರು ಮತ್ತು ಮರಾಠರು ಆ) ಬ್ರಿಟಿಷರು ಮತ್ತು ಟಿಪ್ಪು ಸುಲ್ತಾನ್
   ಇ) ಬ್ರಿಟಿಷರು ಮತ್ತು ನಿಜಾಮರು ಈ) ಬ್ರಿಟಿಷರು ಮತ್ತು ಸಿಖ್ಖರು
2. 'ಅಸ್ಪೃಶ್ಯತೆ ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ' ಎಂದು ಹೇಳಿದವರು
   ಅ) ಗಾಂಧೀಜಿ ಆ) ಡಾ. ಬಿ.ಆರ್. ಅಂಬೇಡ್ಕರ್ ಇ) ಪಂಪ ಈ) ಸ್ವಾಮಿ ವಿವೇಕಾನಂದ
3. ಮಹಾ ಹಿಮಾಲಯವನ್ನು 'ಹಿಮಾದ್ರಿ' ಎಂದು ಕರೆಯಲು ಕಾರಣ
   ಅ)ಇದು ಎತ್ತರವಾದ ಶಿಖರಗಳನ್ನು ಹೊಂದಿದೆ
   ಆ) ಇದು ಸಂಪೂರ್ಣವಾಗಿ ಹಿಮದಿಂದ ಆವೃತವಾಗಿದೆ
   ಇ) ಇದು ಅನೇಕ ಹಿಮನದಿಗಳನ್ನು ಹೊಂದಿದೆ
   ಈ) ಇಲ್ಲಿ ಕಣಿವೆ ಮಾರ್ಗಗಳಿವೆ
4. ಭಾರತದಲ್ಲಿ ಅತಿ ಕಡಿಮೆ ಮಳೆ ಪಡೆಯುವ ಪ್ರದೇಶ
   ಅ) ರೂಯ್ಲಿ ಆ) ಮಾಸಿನ್‌ರಾಮ್ ಇ) ಆಗುಂಬೆ ಈ) ಗಂಗಾನಗರ

II. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ವಾಕ್ಯದಲ್ಲಿ ಉತ್ತರಿಸಿ. 3 X1=3

5. ಭಾರತವು ಯಾವ ಮಾದರಿಯ ವಾಯುಗುಣವನ್ನು ಹೊಂದಿದೆ?
6. ಉತ್ತರ ಭಾರತದ ಮೈದಾನವು ಬೇಸಿಗೆಯಲ್ಲಿ ಅತಿ ಹೆಚ್ಚು ಉಷ್ಣಾಂಶವನ್ನು ಹೊಂದಿರುತ್ತದೆ ಏಕೆ?
7. 'ಭಾರತದ ಆರ್ಥಿಕ ಯೋಜನೆಯ ಪಿತಾಮಹ' ಯಾರು?

III. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಮೂರರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. 4X2=8

8. ಸಹಾಯಕ ಸೈನ್ಯ ಪದ್ಧತಿಯ ಮುಖಾಂತರ ಬ್ರಿಟಿಷರಿಗೆ ಸೈನ್ಯದ ನಿರ್ವಹಣೆಯು ಸುಲಭವಾಯಿತು. ಹೇಗೆ?
9. ರೆಗ್ಯುಲೇಟಿಂಗ್ ಕಾಯ್ದೆಯ ಮುಖ್ಯ ಲಕ್ಷಣಗಳಾವುವು?
10. ''ಸಾರ್ವಜನಿಕ ಆಡಳಿತವು ವ್ಯಕ್ತಿಯ ಹುಟ್ಟಿನಿಂದ ಮರಣದವರೆಗೆ ಅಗತ್ಯವಾದ ಸೇವೆಗಳನ್ನು.ಒದಗಿಸುತ್ತದೆ". ಸಮರ್ಥಿಸಿ.
11. ಭಾರತದ ವ್ಯವಸಾಯವು 'ಮಾನ್ಸೂನ ಮಾರುತಗಳೊಡನೆ ಅಡುವ ಜೂಜಾಟವಾಗಿದೆ'. ಹೇಗೆ?

IV. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಐದರಿಂದ ಅರು ವಾಕ್ಯಗಳಲ್ಲಿ ಉತ್ತರಿಸಿ. 5X3=15

12. ಬ್ರಿಟಿಷ್ ವಿದ್ಯಾಭ್ಯಾಸ ಕ್ರಮವು ಭಾರತದಲ್ಲಿ ಪ್ರಗತಿಪರ ಅಲೋಚನೆಗಳನ್ನೊಳಗೊಂಡ ಹೊಸ ತಲೆಮಾರನ್ನು ಸೃಷ್ಟಿಸಿತು. .ಸಮರ್ಥಿಸಿ.
13. ಅಸ್ಪೃಶ್ಯತಾ ನಿವಾರಣೆಯ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳಾವುವು?.
14. ಲೂಥರ್ ಗುಲಿಕ್‌ರ 'ಪೋಸ್ಡ್‌ಕಾರ್ಬ್' ( POSDCoRB) ದೃಷ್ಟಿಕೋನದಲ್ಲಿ ಸಾರ್ವಜನಿಕ ಆಡಳಿತದ ವ್ಯಾಪ್ತಿಯನ್ನು ವಿವರಿಸಿ.
15. ಪಂಚವಾರ್ಷಿಕ ಯೋಜನೆಯ ಸಾಧನೆಗಳೇನು?
16. ಬ್ಯಾಂಕಿನ ಗುಣಲಕ್ಷಣಗಳಾವುವು?

V. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. 4X4=1.

17. ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡು ಹಿಡಿಯಲು ಕಾರಣಗಳೇನು?
18. ಹಿಮಾಲಯ ಪರ್ವತಶ್ರೇಣಿಗಳಿಂದಾಗುವ ಪ್ರಯೋಜನಗಳಾವುವು?

VI. 19. ಭಾರತದ ಬಾಹ್ಯರೇಖಾ ನಕ್ಷೆ ಬರೆದು ಈ ಕೆಳಗಿನವುಗಳನ್ನು ಗುರುತಿಸಿ. **1+½+½ =2**

ಅ) $23\frac{1}{2}^{0}$ ಉತ್ತರ ಅಕ್ಷಾಂಶ ಆ) ಮಲಬಾರ್ ತೀರ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಬೆಂಗಳೂರು ನಗರ ಜಿಲ್ಲೆ ಮತ್ತು ಉಪನಿರ್ದೇಶಕರ ಕಚೇರಿ ಬೆಂಗಳೂರು ದಕ್ಷಿಣ ಜಿಲ್ಲೆ

ಎಸ್ ಎಸ್ ಎಲ್.ಸಿ. ಸರಣಿ ಪರೀಕ್ಷೆ - 2024-25 ಪ್ರಶ್ನೆ ಪತ್ರಿಕೆ -2

ವಿಷಯ: ಸಮಾಜ ವಿಜ್ಞಾನ ಸಮಯ: 90 ನಿಮಿಷ ಅಂಕಗಳು—40

**************************************************************************************************

I. ಕೆಳಗೆ ಕೊಟ್ಟಿರುವ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ ಹೆಚ್ಚು ಸೂಕ್ತವಾದ ಉತ್ತರವನ್ನು ಆಯ್ಕೆ ಮಾಡಿ ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ 4X1=4

1. 1834ರಲ್ಲಿ ಕೊಡಗಿನಲ್ಲಿ ರಾಜಕೀಯ ಅಸಮಾಧಾನ ಸೃಷ್ಟಿಯಾಗಲು ಕಾರಣ
   ಅ) ರೈತ ಬಂಡಾಯ ಪ್ರಾರಂಭ ಆರಂಭವಾದದ್ದು ಆ) ಕಲ್ಯಾಣ ಸ್ವಾಮಿಯನ್ನು ಬಂಧಿಸಿದ್ದು
   ಇ) ಚಿಕ್ಕವೀರರಾಜೇಂದ್ರನನ್ನು ಬ್ರಿಟಿಷರು ಪದಚ್ಯುತಿಗೊಳಿಸಿದ್ದು ಈ) ಪುಟ್ಟಬಸಪ್ಪನ ಪಲಾಯನ
2. ಆಧುನಿಕ ಕಾಲದಲ್ಲಿ ವರ್ಗವ್ಯವಸ್ಥೆ ಉಂಟಾಗಲು ಮುಖ್ಯ ಕಾರಣ
   ಅ) ನಗರೀಕರಣ ಆ) ಶ್ರಮವಿಬಜನೆ ಇ)ಕೈಗಾರಿಕೀಕರಣ ಈ) ಸರ್ಕಾರದ ನೀತಿ
3. ಹತ್ತಿ ಬೆಳೆಗೆ ಬಹು ಸೂಕ್ತವಾದ ಮಣ್ಣು
   ಅ) ಕೆಂಪು ಮಣ್ಣು ಆ)ಕಪ್ಪು ಮಣ್ಣು ಇ)ಮೆಕ್ಕಲು ಮಣ್ಣು ಈ) ಪರ್ವತ ಮಣ್ಣು
4. ಭವಿಷ್ಯದ ಅವಶ್ಯಕತೆಗಳಿಗೆ ವ್ಯವಸ್ಥಿತ ಠೇವಣಿಗಾಗಿ ತೆರೆಯಬಹುದಾದ ಖಾತೆ
   ಅ) ಉಳಿತಾಯ ಖಾತೆ ಆ) ಚಾಲ್ತಿ ಖಾತೆ
   ಇ) ಆವರ್ತ ಠೇವಣಿ ಖಾತೆ ಈ) ನಿಶ್ಚಿತ ಠೇವಣಿ ಖಾತೆ

II. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ವಾಕ್ಯದಲ್ಲಿ ಉತ್ತರಿಸಿ. 3X1=3

5. ಕರ್ನಾಟಕ ಸರ್ಕಾರ ಡಾ. ಡಿ. ಎಂ. ನಂಜುಂಡಪ್ಪ ಸಮಿತಿ ರಚಿಸಿದ ಉದ್ದೇಶವೇನು?
6. ಅಸ್ಸಾಂ ಮತ್ತು ಮೇಘಾಲಯಗಳಲ್ಲಿ ಕಂಡುಬರುವ ಅರಣ್ಯದ ಪ್ರಕಾರ ಯಾವುದು?
7. '1987ರಲ್ಲಿ ಮೊದಲ 'ವಿಶ್ವ ಆಹಾರ ಪ್ರಶಸ್ತಿ' ಪಡೆದವರು ಯಾರು?

III. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಮೂರರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. 4X2=8

8. ನಾಲ್ಕನೇ ಆಂಗ್ಲೋ ಮೈಸೂರು ಯುದ್ದದ ಪರಿಣಾಮಗಳೇನು?
9. 19ನೇ ಶತಮಾನವನ್ನು ' ಭಾರತೀಯ ಪುನರುಜ್ಜೀವನ ಕಾಲ' ಎಂದು ಕರೆಯಲು ಕಾರಣವೇನು?
10. ಲಾಭಕೋರತನದಿಂದ ಅನೇಕ ದುಷ್ಪರಿಣಾಮಗಳಾಗುತ್ತವೆ. ಈ ಹೇಳಿಕೆಯನ್ನು ಸಮರ್ಥಿಸಿ.
11. ಪಂಚ ವಾರ್ಷಿಕ ಯೋಜನೆಗಳ ಉದ್ದೇಶಗಳೇನು?

IV. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಐದರಿಂದ ಅರು ವಾಕ್ಯಗಳಲ್ಲಿ ಉತ್ತರಿಸಿ. 5X3=15

12. ಸತ್ಯಶೋಧಕ ಸಮಾಜದ ಸುಧಾರಣೆಗಳನ್ನು ವಿವರಿಸಿ.
13. ಲಿಂಗತ್ವ ಅಲ್ಪಸಂಖ್ಯಾತರ ತಾರತಮ್ಯ ಹೋಗಲಾಡಿಸಲು ಕೈಗೊಂಡಿರುವ ಉಪಕ್ರಮಗಳನ್ನು ತಿಳಿಸಿ.
14. ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?
15. ಮಣ್ಣಿನ ಸಂರಕ್ಷಣಾ ವಿಧಾನಗಳನ್ನು ವಿವರಿಸಿ.

    ಅಥವಾ

    ನೀರಿನ ಪ್ರಾಮುಖ್ಯತೆಯನ್ನು ವಿವರಿಸಿ
16. ಬ್ಯಾಂಕ್ ಸಲ್ಲಿಸುವ ಸೇವೆಗಳಾವುವು?

    ಅಥವಾ

    ಬ್ಯಾಂಕ್ ಖಾತೆ ತೆರೆಯಲು ಅನುಸರಿಸಬೇಕಾದ ಹಂತಗಳಾವುವು?

V. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. 4X4=16

17. ಕಿತ್ತೂರು ರಾಣಿ ಚೆನ್ನಮ್ಮ ಇಂದಿಗೂ ಕೂಡಾ ನಾಡಿಗೆ ಆದರ್ಶಪ್ರಾಯವಾಗಿದ್ದಾಳೆ. ಈ ಹೇಳಿಕೆಯನ್ನು ವಿಶ್ಲೇಷಿಸಿ.

    ಅಥವಾ

    ಚಿಕ್ಕದೇವರಾಜ ಒಡೆಯರು ಒಬ್ಬ ದಕ್ಷ ಆಡಳಿತಗಾರರಾಗಿದ್ದರು. ಈ ಹೇಳಿಕೆಯನ್ನು ಸಮರ್ಥಿಸಿ
18. ಅರಣ್ಯಗಳ ಮಹತ್ವವನ್ನು ವಿವರಿಸಿ.

VI. 19. ಭಾರತದ ಬಾಹ್ಯರೇಖಾ ನಕ್ಷೆ ಬರೆದು ಈ ಕೆಳಗಿನವುಗಳನ್ನು ಗುರುತಿಸಿ. **1+½+½ =2**

ಅ) ಭಾರತದ ಎರಡನೇ ಅತಿ ಎತ್ತರದ ಆಣೇಕಟ್ಟು ಆ) ಬಸವ ಸಾಗರ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಬೆಂಗಳೂರು ನಗರ ಜಿಲ್ಲೆ ಮತ್ತು ಉಪನಿರ್ದೇಶಕರ ಕಚೇರಿ
ಬೆಂಗಳೂರು ದಕ್ಷಿಣ ಜಿಲ್ಲೆ

ಎಸ್ ಎಸ್ ಎಲ್.ಸಿ. ಸರಣಿ ಪರೀಕ್ಷೆ- 2024-25 ಪ್ರಶ್ನೆ ಪತ್ರಿಕೆ -3

ವಿಷಯ: ಸಮಾಜ ವಿಜ್ಞಾನ ಸಮಯ: 90ನಿಮಿಷ ಅಂಕಗಳು—40

************************************************************************************

**I. ಕೆಳಗಿನ ಪ್ರತಿಯೊಂದು ಅಪೂರ್ಣ ಹೇಳಿಕೆಗೆ ನಾಲ್ಕು ಪರ್ಯಾಯಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾಗಿರುವುದನ್ನು ಆರಿಸಿ ಬರೆಯಿರಿ.** **4X1=4**

**1.** ಭಾರತದ ವಿದೇಶಾಂಗ ನೀತಿಯ ಪಿತಾಮಹ

**A)** ಜವಾಹರ್ ಲಾಲ್ ನೆಹರು **B)** ಡಾ ಬಿ ಆರ್ ಅಂಬೇಡ್ಕರ್

**C)** ವಲ್ಲಭ ಭಾಯ್ ಪಟೇಲ್ **D)** ಮಹಾತ್ಮ ಗಾಂಧೀಜಿ

**2.** ಇತ್ತೀಚೆಗೆ ಭಾರತದಿಂದ ರಫ್ತು ಆಗುವ ಅಬ್ರಕದ ಪ್ರಮಾಣ ಕಡಿಮೆಯಾಗಿದೆ . ಏಕೆಂದರೆ

**A)** ರಫ್ತು ತೆರಿಗೆಯಲ್ಲಿನ ಹೆಚ್ಚಳ **B)** ಅಬ್ರಕದ ನಿಕ್ಷೇಪಗಳು ಕಡಿಮೆಯಾಗುತ್ತಿವೆ

**C)** ಅಬ್ರಕದ ಬದಲಿ ವಸ್ತುಗಳು ದೊರೆಯುತ್ತಿವೆ **D)** ಉತ್ಪಾದನಾ ವೆಚ್ಚದ ಹೆಚ್ಚಳ

**3.** ಆತ್ಮ ಗೌರವ ಚಳುವಳಿಯನ್ನು ಪ್ರಾರಂಭಿಸಿದವರು

**A) M. D.** ನಂಜುಂಡಸ್ವಾಮಿ. **B)** ಪೆರಿಯಾರ್ ರಾಮಸ್ವಾಮಿ **C)** ಮೇಧಾ ಪಾಟ್ಕರ್. **D)** ಡಾ. ಶಿವರಾಮ ಕಾರಂತ

**4.** ಜಿಲ್ಲಾ ಕೈಗಾರಿಕಾ ಕೇಂದ್ರಗಳು ಪ್ರಾರಂಭವಾಗಿದ್ದು

**A) 1956** **B) 1965** **C) 1998** **D) 1978**

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ** **3X1=3**

**5)** ಬಸವ ಯೋಜನೆ ಕಾರ್ಯಕ್ರಮದ ಉದ್ದೇಶವೇನು?

**6)** ಭಾರತ ರಾಷ್ಟ್ರೀಯ ಕಾಂಗ್ರೆಸ್ ಸೈಮನ್ ಕಮಿಷನ್ ಅನ್ನು ಬಹಿಷ್ಕರಿಸಲು ಕಾರಣವೇನು?

**7)** ಶಸ್ತ್ರಾಸ್ತ್ರ ಪೈಪೋಟಿಯು ಜಗತ್ತಿನ ವಿನಾಶಕ್ಕೆ ಕಾರಣವಾಗುತ್ತದೆ. ಹೇಗೆ?

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.** **4X2=8**

**8)** ಭಾರತದ ವಿದೇಶಾಂಗ ನೀತಿಯ ಸಾಮಾನ್ಯ ನಿರ್ಧಾರಕ ಅಂಶಗಳನ್ನು ಪಟ್ಟಿ ಮಾಡಿ.

**9)** ಚಿಪ್ಕೋ ಚಳುವಳಿಯನ್ನು ಸಂಕ್ಷಿಪ್ತವಾಗಿ ವಿವರಿಸಿ.

**10)** ಶಕ್ತಿ ಸಂಪನ್ಮೂಲಗಳ ಕೊರತೆಯನ್ನು ನೀಗಿಸಲು ಕೈಗೊಳ್ಳಬೇಕಾದ ಅವಶ್ಯಕ ಕ್ರಮಗಳಾವುವು?

**11)** ಬ್ರಿಟಿಷ್ ಸೈನ್ಯದಲ್ಲಿದ್ದ ಭಾರತೀಯ ಸೈನಿಕರ ಪರಿಸ್ಥಿತಿ ಅತ್ಯಂತ ಶೋಚನೀಯವಾಗಿತ್ತು. ಈ ಹೇಳಿಕೆಯನ್ನು ವಿಶ್ಲೇಷಿಸಿ.

**IV. ಈ ಕೆಳಗಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **5X3=15**

**12)** ಖಾರಿಫ್ ಮತ್ತು ರಾಬಿ ಬೇಸಾಯಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

**13)** ಇಂದು ಬಳಕೆಯಲ್ಲಿರುವ ಆಧುನಿಕ ತಂತ್ರಜ್ಞಾನಗಳಲ್ಲಿ ದೂರ ಸಂವೇದಿ ತಂತ್ರಜ್ಞಾನ ಅತಿ ಮುಖ್ಯವಾದ**ದು.** ಹೇಗೆ?

**14)** ಭಾರತದ ಸಬಲೀಕರಣಕ್ಕೆ ಗ್ರಾಮೀಣ ಅಭಿವೃದ್ಧಿ ಅಗತ್ಯ. ಏಕೆ?

**15)** ಉದ್ಯಮಶೀಲತೆಯು ಒಂದು ಸಾಹಸಮಯ ಚಟುವಟಿಕೆ. ವಿವರಿಸಿ.

**16) 1857**ರ ಕ್ರಾಂತಿಯು ಹಲವಾರು ಬದಲಾವಣೆಗಳನ್ನು ಉಂಟು ಮಾಡಿತು. ವಿವರಿಸಿ.

**V. ಈ ಕೆಳಗಿನ ಪ್ರಶ್ನೆಗೆ 8 ರಿಂದ 10 ವಾಕ್ಯಗಳಲ್ಲಿ ಉತ್ತರಿಸಿ.** **2X4=8**

**17)** ಭಾರತೀಯರಲ್ಲಿ ರಾಷ್ಟ್ರೀಯ ಚಳುವಳಿಯನ್ನು ಪ್ರೇರೇಪಿಸುವಲ್ಲಿ ಬಾಲಗಂಗಾಧರ ತಿಲಕರು ಪ್ರಮುಖ ಪಾತ್ರ ವಹಿಸಿದ್ದಾರೆ. ಸಮರ್ಥಿಸಿ.

ಅಥವಾ

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸರ **ಪಾ**ತ್ರ ಒಂದು ಮೈಲುಗಲ್ಲಾಗಿದೆ. ಸಮರ್ಥಿಸಿ.

**18)** ಭೂ ಬಳಕೆಯ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಪಟ್ಟಿ ಮಾಡಿ.

VI **.19) ಭಾರತದ ನಕ್ಷೆಯನ್ನು ಅಂದವಾಗಿ ಬರೆದು, ಈ ಕೆಳಕಂಡ ಸ್ಥಳಗಳನ್ನು ಗುರುತಿಸಿ.** **1+½+½ = 2**

i) ರಾಣ ಪ್ರತಾಪಸಾಗರ **i i)** ಕಾಂಡ್ಲಾ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಬೆಂಗಳೂರು ನಗರ ಜಿಲ್ಲೆ ಮತ್ತು ಉಪನಿರ್ದೇಶಕರ ಕಚೇರಿ
ಬೆಂಗಳೂರು ದಕ್ಷಿಣ ಜಿಲ್ಲೆ
ಎಸ್ ಎಸ್ ಎಲ್.ಸಿ. ಸರಣಿ ಪರೀಕ್ಷೆ - 2024-25 ಪ್ರಶ್ನೆ ಪತ್ರಿಕೆ -4

ಸಮಯ: 90ನಿಮಿಷ ವಿಷಯ: ಸಮಾಜ ವಿಜ್ಞಾನ ಅಂಕಗಳು—40

*******************************************************************************************

I .ಈ ಕೆಳಗಿನ ಪ್ರಶ್ನೆಗಳಿಗೆ ಸೂಕ್ತ ಉತ್ತರಗಳನ್ನು ಆರಿಸಿ ಬರೆಯಿರಿ 4X1=4

1. ಭಾರತದ ಸಂಸ್ಥಾನಗಳನ್ನು ವಿಲೀನೀಕರಿಸಿದವರೆಂದರೆ,
   a.ಜವಾಹರ್ ಲಾಲ್ ನೆಹರು b. ಸರ್ದಾರ್ ವಲ್ಲಭಬಾಯಿ ಪಟೇಲ್
   c.ಬಾಬು ರಾಜೇಂದ್ರ ಪ್ರಸಾದ್ d.ಫಜಲ್ ಅಲಿ
2. ಸಂವಿಧಾನದ 24 ನೇವಿಧಿಯು ತಿಳಿಸುವುದೇನೆಂದರೆ,
   a. ಮಕ್ಕಳನ್ನು ದುಡಿಮೆಗೆ ತೊಡಗಿಸಬಾರದೆಂದು ಹೇಳಿದೆ
   b. ಮಕ್ಕಳಿಗೆ ಕಡ್ಡಾಯ ಶಿಕ್ಷಣವನ್ನು ಕೊಡಿಸಬೇಕೆಂದು ಹೇಳಿದೆ
   c. ಮಕ್ಕಳ ಸಮಾನತೆಯನ್ನುಕಾಪಾಡುತ್ತದೆ
   d. ಮಹಿಳೆಯರ ರಕ್ಷಣೆಯಬಗ್ಗೆಹೇಳುತ್ತದೆ
3. ಭಾರತದ 'ಮ್ಯಾಂಚೆಸ್ಟರ್'ಎಂದು ಹೆಸರಾದ ನಗರ
   a.ಬೆಂಗಳೂರು b.ಮುಂಬೈ c. ಚೆನ್ನೈ d. ಕೊಲ್ಕತ್ತಾ
4. ವಿಶ್ವ ಗ್ರಾಹಕ ದಿನವನ್ನು ಈ ದಿನದಂದು ಆಚರಿಸಲಾಗುತ್ತದೆ
   a. ಮಾರ್ಚ್ 15 b. ಮೇ 1 c. ಜೂನ್ 5 d. ಡಿಸೆಂಬರ್ 10

II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ 3X1=3

5. ವಿಶ್ವ ಆರೋಗ್ಯ ಸಂಸ್ಥೆಯ ಪ್ರಮುಖ ಕಾರ್ಯವೇನು?
6. ಕೇಂದ್ರ ಸರ್ಕಾರದ ಮುಂಗಡ ಪತ್ರವನ್ನು ಮಂಡಿಸುವ ಅಧಿಕಾರ ಯಾರಿಗೆ ಇದೆ?
7. ಹೆಚ್ಚು ಕಡಲ ಕೊರೆತಕ್ಕೆ ಒಳಗಾಗುವ ಭಾರತದ ಕರಾವಳಿ ಯಾವುದು?

III . ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ 4X2=8

8. ಸ್ವತಂತ್ರ್ಯಾನಂತರ ಭಾರತ ಎದುರಿಸಿದ ಸಮಸ್ಯೆಗಳಾವುವು?
9. ಜುನಾಗಡ್ ಭಾರತ ಒಕ್ಕೂಟವನ್ನು ಸೇರಿದ್ದು ಹೇಗೆ?
10. ವಿಶ್ವಸಂಸ್ಥೆಯ ಭದ್ರತಾ ಸಮಿತಿ ಜಗತ್ತಿನ ಶಾಂತಿ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಎಂಬುದನ್ನುಸಮರ್ಥಿಸಿ.

    ಅಥವಾ

    ಸಾರ್ಕ್ ಒಕ್ಕೂಟವು ದಕ್ಷಿಣ ಏಷ್ಯಾ ರಾಷ್ಟ್ರಗಳನ್ನು ಒಗ್ಗೂಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂಬುದನ್ನು ಸಮರ್ಥಿಸಿ.
11. ಗ್ರಾಹಕ ಕಾಯ್ದೆಯ ನಾಲ್ಕು ಮುಖ್ಯ ಉದ್ದೇಶಗಳನ್ನು ತಿಳಿಸಿ.

IV. ಈ ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿರಿ 5X3=15

12. ಎರಡನೇ ವಿಶ್ವಯುದ್ಧಕ್ಕೆ ಕಾರಣಗಳೇನು?
13. ವಿಶ್ವಸಂಸ್ಥೆಯ ಸಾಧನೆಗಳನ್ನು ವಿವರಿಸಿ
14. ಬಾಲ ಕಾರ್ಮಿಕರಾಗಲು ಕಾರಣಗಳೇನು?

    ಅಥವಾ

    ಬಾಲ್ಯ ವಿವಾಹದಿಂದ ಉಂಟಾಗುವ ಪರಿಣಾಮಗಳನ್ನು ವಿವರಿಸಿ.
15. ಒಂದು ಪ್ರದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಬೇಕಾದ ಸ್ಥಾನೀಕರಣ ಅಂಶಗಳನ್ನುವಿವರಿಸಿ

    ಅಥವಾ

    ಚಂಡಮಾರುತಗಳಿಂದ ಉಂಟಾಗುವ ಪರಿಣಾಮಗಳನ್ನುವಿವರಿಸಿ

16. ವೈಯಕ್ತಿಕ ಹಣಕಾಸು ಮತ್ತು ಸಾರ್ವಜನಿಕ ಹಣಕಾಸಿನ ನಡುವಿನ ವ್ಯತ್ಯಾಸ ತಿಳಿಸಿ

V ಈ ಕೆಳಗಿನ ಪ್ರಶ್ನೆಗಳಿಗೆ 7 ಅಥವಾ 8 ವಾಕ್ಯಗಳಲ್ಲಿ ಉತ್ತರಿಸಿರಿ 2X4=8

17. ನಾಜಿ ಸಿದ್ಧಾಂತವು ಜರ್ಮನಿಯನ್ನು ಹಾಳುಮಾಡಿತು ಎಂಬುದನ್ನು ಹೇಗೆ ಸಮರ್ಥಿಸುವಿರಿ

ಅಥವಾ

ಸರ್ವಾಧಿಕಾರಿಗಳ ಅಧಿಕಾರದ ದಾಹವು ಎರಡನೇ ಮಹಾಯುದ್ಧಕ್ಕೆ ನಾಂದಿಯಾಯಿತು ಎಂಬುದನ್ನು ಸಮರ್ಥಿಸಿ

18. ಪ್ರವಾಹಗಳಿಗೆ ಕಾರಣಗಳೇನು?

VI 19. ಭಾರತ ನಕಾಶೆಯನ್ನು ಬಿಡಿಸಿ ಕೆಳಗಿನವುಗಳನ್ನು ಗುರುತಿಸಿ 1+1=2

a.ಭದ್ರಾವತಿ b. ಕೊಯ್ನಾ

*******************